# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 19 / 2017

ಪಿರ್ಯಾದುದಾರರು ಃ ಕುದೂರು ಪೋಲಿಸು ಠಾಣೆ

**ವಿರುದ್ಧ**

**ಆರೋಪಿ ಃ ಶಫಿಯುಲ್ಲಾ**

**ಚಾಸಾ ಃ- 14 / ಪ್ರಾಸಾ ಃ- 01**

| | |
|---|---|
| ಹೆಸರು | **ರಾಜಶೇಖರಯ್ಯ** |
| ತಂದೆಯ / ಗಂಡನ ಹೆಸರು | **ಲೇಟ್ ಪುಟ್ಟೆರಣ್ಣ** |
| ವಯಸ್ಸು | **62** |
| ಉದ್ಯೋಗ | **ನಿವೃತ್ತ ಎ.ಎಸ್.ಐ,** |
| ವಿಳಾಸ | **ತುಮಕೂರು** |

**ದಿನಾಂಕಃ 09-08-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ನಾನು ಕುದೂರು ಪೋಲಿಸು ಠಾಣೆಯಲ್ಲಿ 2013 ರಿಂದ 2021 ರವರೆಗೆ ಮುಖ್ಯಪೇದೆ ಮತ್ತು ಎ.ಎಸ್.ಐ. ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 13-05-2014 ರಂದು ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಸಂಜೆ 5 ಗಂಟೆಯ ಸಮಯದಲ್ಲಿ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಪಡೆದುಕೊಂಡು ಠಾಣ ಮೊಕದ್ದಮ್ಮೆ ಸಂಖ್ಯೆಃ 169/2014 ಕಲಂ-279 ಮತ್ತು 337 ರ ಐಪಿಸಿ ರೀತ್ಯಾ ಪ್ರಕರಣ

ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು, ಪ್ರಥಮ ವರ್ತಮಾನ ವರದಿಯನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

2. ನಿಪಿ-1 ರ ಆಧಾರದ ಮೇಲೆ ಮಾರನೇ ದಿವಸ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದ್ದು, ಚಾಸಾ-1 ರವರು ತೋರಿಸಿದ ಜಾಗದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 10 ರಿಂದ 10.45 ರವರಗೆ ಮಹಜರ್ ಕ್ರಮ ಅನುಸರಿಸಿ ಮಹಜರ್ ಕ್ರಮ ಅನುಸರಿಸಿ, ಸ್ಥಳದಲ್ಲಿ ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತೇನೆ. ಮಹಜರ್ ಸಮಯದಲ್ಲಿ ಸ್ಥಳದಲ್ಲಿದ್ದ ಅಪಘಾತಕ್ಕೆ ಒಳಗಾದ ಕೆಎ-53-ಬಿ-3929 ಲಾರಿ ಮತ್ತು ಅಪಘಾತ ಪಡಿಸಿದ ಕೆಎ-40-0839 ಕ್ಯಾಂಟರ್ ವಾಹನವನ್ನು ಪಂಚರ ಸಮಕ್ಷಮ ಅಮಾನತು ಪಡಿಸಿಕೊಂಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸುವಂತೆ ಕೇಳಿದಾಗ ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ಸ್ಥಳ ಮಹಜರ್ ಆಗಿದ್ದು, ಸ್ಥಳ ಮಹಜರ್ ನ್ನು ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಕಚ್ಚಾ ನಕ್ಷೆಯನ್ನು ನೋಡಿ ಗುರುತಿಸಿದ್ದು, ಕಚ್ಚಾ ನಕ್ಷೆಯನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಸದರಿ ವಾಹನಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ವಾಹನಗಳ ಬಗ್ಗೆ ಆರೋಪಿ ಪರ ವಕೀಲರು ಗುರುತಿನ ಬಗ್ಗೆ ಯಾವುದೇ ತಕರಾರು ಇಲ್ಲವೆಂದು ನುಡಿಯುತ್ತಾರೆ. ಸದರಿ ಪ್ರಕರಣ ಘೋರ ಸ್ವರೂಪವಾದ ಕಾರಣ ಮುಂದಿನ ತನಿಖೆಗಾಗಿ ಚಾಸಾ-15 ರವರಿಗೆ ಕಡತವನ್ನು ವರ್ಗಾಹಿಸಿಕೊಂಡಿರುತ್ತೇನೆ. ನಂತರ ದಿನಾಂಕಃ 20-05-2014 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಬೆಳಿಗ್ಗೆ 6.30 ಗಂಟೆಯ ಸಮಯದಲ್ಲಿ ಹರ್ಷ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳು ಮೃತಪಟ್ಟಿರುತ್ತಾರೆಂದು, ಮೃತರ ಚಿಕ್ಕಪ್ಪ ಸಯ್ಯದ್

ಯೂಸುಫ್ ರವರು ನಮಗೆ ಅರ್ಜಿ ನೀಡುತ್ತಾರೆ. ಅದರಂತೆ ನಾನು ಮಾನ್ಯ ನ್ಯಾಯಾಲಯಕ್ಕೆ ಕಲಂ-304(ಎ) ಐಪಿಸಿ ಅಳವಡಿಸಿಕೊಳ್ಳಲು ಮನವಿಪತ್ರ ಸಲ್ಲಿಸಿರುತ್ತೇನೆ.

**ಪಾಟೀ ಸವಾಲು** ಃ- **ಶ್ರೀ. ಎಸ್.ವಿ.** ವಕೀಲರಿಂದ **ಆರೋಪಿ** ಪರವಾಗಿ ಃ-

ಪಿರ್ಯಾದಿ ದೂರು ನೀಡಿದ ನಂತರ ನೀವು ಘಟನ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಪಿರ್ಯಾದಿ ನೀಡಿದ ದೂರಿನ ಆಧಾರದ ಮೇಲೆ ನಾನು ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಸರಿ. ಆ ನಂತರದಲ್ಲಿಯೇ ನಾನು ಸ್ಥಳಕ್ಕೆ ಭೇಟಿ ನೀಡಿರುತ್ತೇನೆಂದರೆ ಸರಿ. ನೀವು ಸ್ಥಳಕ್ಕೆ ಭೇಟಿ ನೀಡಿದಾಗ ಅಲ್ಲಿ ಗಾಯಾಳು ಯಾರು ಮತ್ತು ಯಾವ ಸ್ಥಿತಿಯಲ್ಲಿ ಇದ್ದರು ಹಾಗೂ ಎಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು ಎಂದು ಯಾವುದೇ ಮಾಹಿತಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ಪಿರ್ಯಾದಿಯು ತಮ್ಮ ದೂರಿನಲ್ಲಿ ದಿನಾಂಕ 13-05-2014 ರಂದು ಲಾರಿ ನೆಲಮಂಗಲ ಕಡೆಯಿಂದ ಯಡಿಯೂರು ಕಡೆಗೆ ಹೋಗುತ್ತಿತ್ತು ಎಂದು ದೂರು ನೀಡಿರುತ್ತಾರೆಂದರೆ ಸರಿ. ಕೆಎ-53-ಬಿ-3929 ಲಾರಿ ಅತಿವೇಗವಾಗಿ ಚಾಲನೆ ಮಾಡಿಕೊಂಡು ಬಂದು ಎಡಬದಿಯಲ್ಲಿ ಚಲಿಸುತ್ತಿದ್ದಂತಹ ಕೆಎ-40-0839 ಕ್ಯಾಂಟರ್ ವಾಹನದ ಮುಂಬದಿಗೆ ಬಂದು ಓವರ್ ಟೇಕ್ ಮಾಡಲು ಹೋಗಿ ಡಿಕ್ಕಿ ಪಡಿಸಿರುತ್ತದೆಂದರೆ ಸರಿಯಲ್ಲ. ಪಿರ್ಯಾದಿಯ ಮಾತು ಕೇಳಿಕೊಂಡು ಸುಳ್ಳು ದೂರಿನ ಮೇರೆಗೆ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆಂದರೆ ಸರಿಯಲ್ಲ.

2. ಪಿರ್ಯಾದಿ ಸುಳ್ಳು ದೂರು ನೀಡಿರುವುದರಿಂದಲೇ ಗಾಯಾಳುಗಳು ಯಾರು ಎಂದು ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪಿರ್ಯಾದುದಾರರು ನೀಡಿದ ಸುಳ್ಳು ದೂರಿನ ಮೇರೆಗೆ ಸುಳ್ಳು ಮಹಜರ್ ತಯಾರಿಸಿರುತ್ತೀರಿ ಎಂದರೆ ಸರಿಯಲ್ಲ. ಪಿರ್ಯಾದುದಾರರೇ ತೊಂದರೆ ಮಾಡಿದ್ದು, ನೀವು ಅವರ ಮಾತುಕೇಳಿ ಆರೋಪಿಯ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. ನೀವು ಸರಿಯಾದ ತನಿಖೆ ಮಾಡದೇ, ನೀವು ಘಟನ ಸ್ಥಳಕ್ಕೆ ಹೋಗದೆ ಸ್ಥಳ ಮಹಜರನ್ನು

ಠಾಣೆಯಲ್ಲಿ ಹಾಗೂ ಕಚ್ಚಾ ನಕ್ಷೆಯನ್ನು ಠಾಣೆಯಲ್ಲಿಯೇ ಕುಳಿತು ತಯಾರಿಸಿರುತ್ತೀರಿ ಎಂದರೆ ಸರಿಯಲ್ಲ.  ಕ್ಯಾಂಟರ್ ಮಾಲೀಕರು ಯಾರು ಎಂದು, ಅದರ ಚಾಲಕ ಯಾರೆಂದು ಯಾವುದೇ ತನಿಖೆ ಮಾಡದೇ ಮಾಹಿತಿ ಪಡೆದುಕೊಂಡಿಲ್ಲ ಎಂದರೆ ಸಾಕ್ಷಿ ನನಗೆ ನೆನಪಿಲ್ಲವೆಂದು ನುಡಿಯುತ್ತಾರೆ.  ಮೃತರ ಕುಟುಂಬಕ್ಕೆ ಪರಿಹಾರ ಕೊಡಿಸಲು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ.  ಓಪ್ಪಿರುತ್ತಾರೆ,**

**ಅ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**